# ದಾವಣಗೆರೆ ವಿಶ್ವವಿದ್ಯಾನಿಲಯ

## ಪರೀಕ್ಷಾ ಕೊಠಡಿಯಲ್ಲಿ ಅಭ್ಯರ್ಥಿಗಳು ಅನುಸರಿಸಬೇಕಾದ ಸೂಚನೆಗಳು

1. ಪ್ರತಿ ದಿನ ಇರುವ ಪತ್ರಿಕೆ, ಪರೀಕ್ಷೆ ನಡೆಯುವ ಸ್ಥಳ, ದಿನಾಂಕ, ಸಮಯ ಮತ್ತು ಅದರ ವಿವರವನ್ನು ಅಭ್ಯರ್ಥಿಗಳು ತಿಳಿದಿರಬೇಕು. ಪರೀಕ್ಷೆ ಪ್ರಾರಂಭವಾಗುವುದಕ್ಕೆ ಕನಿಷ್ಠ 5 ನಿಮಿಷ ಮೊದಲು, ತಮಗೆ ನಿಗದಿಪಡಿಸಿದ ಸ್ಥಳಗಳಲ್ಲಿ ಕುಳಿತುಕೊಳ್ಳಬೇಕು. ಪರೀಕ್ಷೆ ಪ್ರಾರಂಭವಾದ 30 ನಿಮಿಷಗಳ ನಂತರ ಪ್ರವೇಶವಿರುವುದಿಲ್ಲ.
2. ಪರೀಕ್ಷೆ ಪ್ರಾರಂಭವಾದ 30 ನಿಮಿಷಗಳವರೆಗೆ ಯಾವ ಅಭ್ಯರ್ಥಿಯೂ, ಪರೀಕ್ಷಾ ಕೊಠಡಿಯಿಂದ ಹೊರಗೆ ಹೋಗುವಂತಿಲ್ಲ. ನಂತರ ಮುಖ್ಯ ಅಧೀಕ್ಷಕರ ಅಪ್ಪಣೆಯನ್ನು ಪಡೆಯದೆ ಹೊರಗೆ ಹೋದಲ್ಲಿ ಅವರು ಪುನಃ ಕೊಠಡಿ ಒಳಗೆ ಬರುವಂತಿಲ್ಲ.
3. ತಮ್ಮೊಂದಿಗೆ ತೆಗೆದುಕೊಂಡು ಹೋಗಿರುವ ವಸ್ತುಗಳನ್ನು ಕೊಠಡಿಯ ಹೊರಗೆ ಇಡಬೇಕು. ತಮ್ಮ ಜೇಬು, ಡೆಸ್ಕು, ಬೆಂಚು, ಕುರ್ಚಿ ಹಾಗೂ ಅಕ್ಕಪಕ್ಕದಲ್ಲಿ ಇರಬಹುದಾದ ಯಾವುದೇ ಕಾಗದ, ಚೀಟಿ, ಇತರೆ ನಕಲು ಮಾಡಲು ಉಪಯೋಗಿಸಬಹುದಾದ ವಸ್ತುಗಳನ್ನು ಕೊಠಡಿ ಮೇಲ್ವಿಚಾರಕರಿಗೆ, ಪರೀಕ್ಷೆ ಪ್ರಾರಂಭವಾಗುವದಕ್ಕಿಂತ ಮೊದಲೇ ಕೊಡಬೇಕು.
4. ಉತ್ತರಗಳನ್ನು ನೀಲಿ ಅಥವಾ ಕಪ್ಪು ಶಾಹಿಯ ಪೆನ್ನನ್ನು ಮಾತ್ರ ಉಪಯೋಗಿಸಿ ಬರೆಯಬೇಕು. ಉತ್ತರ ಪತ್ರಿಕೆಗಳ ಜೆರಾಕ್ಸ್‌ಪ್ರತಿ ಬೇಕೆಂದು ಇಚ್ಛಿಸುವವರು ಉತ್ತರಗಳನ್ನು ಕಪ್ಪು ಶಾಹಿಯಲ್ಲಿ ಮಾತ್ರ ಬರೆಯಬೇಕು.
5. ಅಗತ್ಯವಿರುವ ಪೆನ್ನು, ಮ್ಯಾಥಮೆಟಿಕಲ್ ಇನ್‌ಸ್ಟ್ರುಮೆಂಟ್ಸ್, ಪ್ರೋಗ್ರಾಂ ಮಾಡಲಾಗದ ಕ್ಯಾಲ್‌ಕ್ಯುಲೇಟರಗಳನ್ನು (Calculator) ಅಭ್ಯರ್ಥಿಯು ಪರೀಕ್ಷಾ ಕೊಠಡಿಯೊಳಗೆ ತೆಗೆದುಕೊಂಡು ಹೋಗಬಹುದು.
6. ನಕ್ಷೆ ಅಥವಾ ಗ್ರಾಫ್ ಹಾಳೆಗಳನ್ನು ಉಪಯೋಗಿಸಿದಲ್ಲಿ ಅವುಗಳ ಮೇಲೆ ಪತ್ರಿಕೆಯ ಕೋಡ್ ನಂ. ಪರೀಕ್ಷಾ ದಿನಾಂಕ ಮತ್ತು ಉತ್ತರ ಪತ್ರಿಕೆಯ ಕ್ರಮ ಸಂಖ್ಯೆಯನ್ನು ಬರೆಯಬೇಕು. (ಅವುಗಳ ಮೇಲೆ ರಿಜಿಸ್ಟರ್ ನಂಬರ್ ಬರೆಯಬಾರದು. )
7. ಉತ್ತರ ಪತ್ರಿಕೆಯ ಮುಖಪುಟದ ಮೇಲೆ ನಿಗದಿಪಡಿಸಿರುವ ಸ್ಥಳದಲ್ಲಿ ಮಾತ್ರ ರಿಜಿಸ್ಟರ್ ನಂ. ಬರೆಯಬೇಕು. ಬೇರೆ ಎಲ್ಲಿಯೂ ರಿಜಿಸ್ಟರ್ ನಂ. ಬರೆಯಬಾರದು. ರಿಜಿಸ್ಟರ್‌ನಂ. 08 ಅಂಕಿಗಳಾಗಿದ್ದು ಪ್ರವೇಶ ಪತ್ರದಲ್ಲಿರುವಂತೆ ಮಾತ್ರ ಬರೆಯಬೇಕು. ಉತ್ತರ ಪತ್ರಿಕೆಯ ಮುಖ ಪುಟದ ಮೇಲ್ಭಾಗದಲ್ಲಿ ಪತ್ರಿಕೆಯ ಹೆಸರು ಪರೀಕ್ಷಾ ದಿನಾಂಕ ಮತ್ತು ಆ ಪತ್ರಿಕೆಯ ಕೋಡ್ ನಂಬರನ್ನು ಸ್ಪಷ್ಟವಾಗಿ ಬರೆಯಬೇಕು.
8. ಉತ್ತರ ಪತ್ರಿಕೆಯ ಕ್ರಮ ಸಂಖ್ಯೆಯನ್ನು ಕೊಠಡಿ ಮೇಲ್ವಿಚಾರಕರ ದಿನಚರಿಯಲ್ಲಿ ಬರೆದು ಅಭ್ಯರ್ಥಿ ಪೂರ್ಣ ಸಹಿ ಮಾಡಬೇಕು.
9. ಪರೀಕ್ಷಾ ಸಮಯದಲ್ಲಿ ಅಭ್ಯರ್ಥಿಗಳು ಯಾವ ರೀತಿಯ ಪ್ರಶ್ನೆಗಳನ್ನು ಕೇಳಬಾರದು.
10. ಪ್ರಾಯೋಗಿಕ ಪರೀಕ್ಷೆಗಳು ನಡೆಯುವ ಕೇಂದ್ರಗಳು ಸೈದ್ಧಾಂತಿಕ (ಥಿಯರಿ) ಪರೀಕ್ಷೆಗಳು ನಡೆಯುವ ಕೇಂದ್ರಗಳಿಗಿಂತ ಬೇರೆಯಾಗಿರಬಹುದು. ಇದನ್ನು ಸಂಬಂಧಿಸಿದ ಕಾಲೇಜಿನಲ್ಲಿ (ಮೂಲ) ಖಚಿತಪಡಿಸಿಕೊಳ್ಳಬೇಕು.
11. ಒಂದು ಕಾಲೇಜಿನ ವಿದ್ಯಾರ್ಥಿ ಬೇರೆ ಕಾಲೇಜಿನಲ್ಲಿ ಥಿಯರಿ (ಸೈದ್ಧಾಂತಿಕ) ಪರೀಕ್ಷೆ ಬರೆಯಬೇಕಾಗಿದ್ದಲ್ಲಿ ಯಾವ ಕಾಲೇಜಿನಲ್ಲಿ ಪರೀಕ್ಷೆ ಬರೆಯಬೇಕು ಎಂಬುದನ್ನು ಪರೀಕ್ಷಾ ಪ್ರವೇಶ ಪತ್ರದಲ್ಲಿ ಮುದ್ರಿಸಲಾಗಿದೆ.
12. ವಿದ್ಯಾರ್ಥಿಯು ತನ್ನ ಗುರುತು ಚೀಟಿ (Identity Card) ಹಾಗೂ ಪ್ರವೇಶ ಪತ್ರ ಇವುಗಳನ್ನು ಪರೀಕ್ಷಾ ಕೊಠಡಿ ಒಳಗೆ ಹೊಂದಿರಬೇಕು.
13. ಪರೀಕ್ಷೆ ಬರೆಯುವಾಗ, ಲೇಖನಿಯನ್ನು ಬದಲಾಯಿಸಬೇಕಾಗಿದ್ದಲ್ಲಿ ಬದಲಾವಣೆ ಮಾಡುವುದಕ್ಕೆ ಮೊದಲು ಕೊಠಡಿ ಮೇಲ್ವಿಚಾರಕರಿಗೆ ತಿಳಿಸಬೇಕು. ಉತ್ತರ ಪತ್ರಿಕೆಯ ಯಾವ ಪುಟದಲ್ಲಿ ಈ ರೀತಿ ಬದಲಾವಣೆ ಮಾಡಲಾಗಿದೆ ಎಂಬುದನ್ನು ಅವರಿಗೆ ತೋರಿಸಬೇಕು.
14. ಪರೀಕ್ಷೆ ತೆಗೆದುಕೊಂಡ ವಿದ್ಯಾರ್ಥಿ ಎಲ್ಲಾ ಪತ್ರಿಕೆಗೆ ಹಾಜರಾಗದಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ವಿತರಿಸಲಾಗುವುದಿಲ್ಲ, ಹಾಗೂ ಪರೀಕ್ಷೆಗೆ ಹಾಜರಾಗಿ ಅನುತ್ತೀರ್ಣರಾದ ಅಥವಾ ಭಾಗಶಃ ಪಾಸಾದ ವಿದ್ಯಾರ್ಥಿಗಳಿಗೂ ಕೂಡ ಅಂಕಪಟ್ಟಿಯನ್ನು ವಿತರಿಸಲಾಗುವುದಿಲ್ಲ.
15. ಉತ್ತರ ಪತ್ರಿಕೆಯಲ್ಲಿ ಕೊನೆಗೆ ಖಾಲಿ ಉಳಿಯುವ ಎಲ್ಲಾ ಹಾಳೆಗಳ ಮೇಲೆ ಉದ್ದನೆಯ ಗೆರೆ ಎಳೆಯಬೇಕು, ಹಾಗೂ ಕಚ್ಚಾ ಬರವಣಿಗೆ (Rough Work) ಮಾಡಿರುವುದಕ್ಕೆ ಗೆರೆ ಎಳೆಯಬೇಕು.
16. ಪೂರ್ತಿ ಅವಧಿಯವರೆಗೆ ಪರೀಕ್ಷಾ ಕೊಠಡಿಯಲ್ಲಿದ್ದವರು ಮಾತ್ರ ಕೊನೆಯಲ್ಲಿ ಪ್ರಶ್ನೆ ಪತ್ರಿಕೆಯನ್ನು ತೆಗೆದುಕೊಂಡು ಹೋಗಬಹುದು. ಪರೀಕ್ಷಾ ಅವಧಿ ಮುಗಿಯುವ ಮುನ್ನ ಪರೀಕ್ಷಾ ಕೇಂದ್ರದಿಂದ ಹೊರಗೆ ಹೋದಲ್ಲಿ ಪ್ರಶ್ನೆಪತ್ರಿಕೆಯನ್ನು ಉತ್ತರ ಪತ್ರಿಕೆಗೆ ಲಗತ್ತಿಸಬೇಕು.
17. ಪ್ರಶ್ನೆಗಳಿಗೆ ಸಂಬಂಧಿಸಿದ ಏನನ್ನೂ ಪ್ರಶ್ನೆ ಪತ್ರಿಕೆಯ ಮೇಲೆ ಬರೆಯಬಾರದು.
18. ನಕಾಶೆ/ಗ್ರಾಫ್ ಹಾಳೆ ಇವುಗಳನ್ನು ಮುಖ್ಯ ಉತ್ತರ ಪತ್ರಿಕೆಗೆ ಜೋಡಿಸಿ ನಿಗದಿತ ಸ್ಥಳದಲ್ಲಿ ಮಾತ್ರ ಕಟ್ಟಬೇಕು. (ಮೇಲಿನಿಂದ 3.3 ಅಂಗುಲ ಕೆಳಗೆ 0.3 ಅಂಗುಲ ಬಲಕ್ಕೆ ಇರುವ ರಂಧ್ರದಲ್ಲಿ).
19. ಉತ್ತರಗಳನ್ನು ಬರೆದು ಮುಗಿಸಿದ ಕೂಡಲೆ (ಪರೀಕ್ಷಾ ಅವಧಿಯ ಕೊನೆಗೆ) ಕೊಠಡಿ ಮೇಲ್ವಿಚಾರಕರು ಬಂದು ತೆಗೆದುಕೊಳ್ಳುವವರೆಗೂ ಅದೇ ಸ್ಥಳದಲ್ಲಿ ಕುಳಿತಿರಬೇಕು. (ಕೈ ಮೇಲೆತ್ತಿ).
20. ಪ್ರಾಯೋಗಿಕ ಪರೀಕ್ಷಾ ಸಂದರ್ಭದಲ್ಲಿ ಪ್ರಯೋಗಶಾಲಾ ಉಪಕರಣಗಳಿಗೆ ಧಕ್ಕೆ ಉಂಟಾದಲ್ಲಿ ಅದಕ್ಕೆ ಸಂಬಂಧಿಸಿದ ವೆಚ್ಚವನ್ನು ವಿದ್ಯಾರ್ಥಿಗಳು ಕಾಲೇಜಿಗೆ ಭರಿಸತಕ್ಕದ್ದು.
21. ಉತ್ತರ ಪತ್ರಿಕೆಯಲ್ಲಿ ಎಲ್ಲೂ ಸಹ ಸಂಕೇತ ಗುರುತುಗಳನ್ನು ಉದಾಹರಣೆಗೆ ಶ್ರೀ ಎಂದಾಗಲೀ, ಓಂ ಎಂದಾಗಲೀ, ನಮಃ ಶಿವಾಯ, ಚುಕ್ಕೆಗಳು ಮತ್ತು ಗುರುತಿಸಲು ಅನುಕೂಲವಾಗುವಂತಹ ಇತರೆ ಯಾವುದೇ ರೀತಿಯ ನಮೂದಗಳು/ಚಿಹ್ನೆಗಳು ಇತ್ಯಾದಿಗಳನ್ನು ಬರೆಯಬಾರದು.
22. ಉತ್ತರಗಳನ್ನು ಬರೆಯುವಾಗ ಮೊದಲನೇ ಪುಟದಿಂದ ಪ್ರಾರಂಭಿಸಿ ಮಧ್ಯೆ-ಮಧ್ಯೆ ಖಾಲಿ ಹಾಳೆಗಳನ್ನು ಬಿಡದೇ ನಿರಂತರವಾಗಿ ಬರೆಯಬೇಕು.
23. ಕೋಡೆಡ್ (ಸಾಂಕೇತಿಕ) ಪರೀಕ್ಷೆಗಳು ಇರುವ ಕಾರಣ ಉತ್ತರ ಪತ್ರಿಕೆ ಮುಖಪುಟದ ಹಿಂಭಾಗದ (ಇನ್ನರ್ ಕವರ್ ಪೇಜ್) ಮೇಲ್ಭಾಗದಲ್ಲಿ ಈ ಕೆಳಗಿನಂತೆ ಉತ್ತರಗಳನ್ನು ಬರೆದಿರುವ ಭಾಷೆಯಲ್ಲಿಯೇ ವಿದ್ಯಾರ್ಥಿ ಸ್ವತಃ ಘೋಷಣೆಯನ್ನು ಬರೆದು ಸಹಿ ಮಾಡಬೇಕು. ಹಾಗೂ ಹೆಸರನ್ನು ಬರೆಯಬೇಕು. "ನಾನು ಪರೀಕ್ಷೆಗೆ ಯಾವ ಸಹಾಯವನ್ನು ಪಡೆದಿಲ್ಲ ಮತ್ತು ಒದಗಿಸಿಲ್ಲ ಹಾಗೂ ಈ ಉತ್ತರ ಪತ್ರಿಕೆಯಲ್ಲಿ ನನ್ನ ಯಾವ ತರಹದ ಗುರುತನ್ನು ನಮೂದಿಸಿಲ್ಲ"

### ಪರೀಕ್ಷಾ ಅಕ್ರಮ

24. ಕ್ರಮ ಸಂಖ್ಯೆ 4, 5 ಮತ್ತು 12ರಲ್ಲಿ ಹೇಳಿರುವುದನ್ನು ಹೊರತುಪಡಿಸಿ ನಕಲು ಮಾಡಲು ಸಹಾಯವಾಗುವಂತಹ ಬೇರೆ ಯಾವುದೇ ರೀತಿಯ ಕಾಗದ/ಚೀಟಿ ವಸ್ತುಗಳನ್ನು ಹೊಂದಿದಲ್ಲಿ, ಬೇರೆ ಅಭ್ಯರ್ಥಿಯ ಉತ್ತರ ಪತ್ರಿಕೆಯಿಂದ ನಕಲು ಮಾಡುತ್ತಿದ್ದಲ್ಲಿ, ಮಾಡಿದ್ದಲ್ಲಿ ತಮ್ಮ ಗುರುತನ್ನು ಯಾವುದೇ ರೀತಿಯಲ್ಲಿ ಉತ್ತರ ಪತ್ರಿಕೆಯಲ್ಲಿ ನಮೂದಿಸಿದ್ದಲ್ಲಿ ಅಥವಾ ಯಾವುದೇ ರೀತಿಯ ಪರೀಕ್ಷಾ ಅಕ್ರಮದಲ್ಲಿ ತೊಡಗಿದ್ದಲ್ಲಿ ಆ ಅಭ್ಯರ್ಥಿಯ ಮೇಲೆ ಪರೀಕ್ಷಾ ಅಕ್ರಮಗಳ ಆಧ್ಯಾದೇಶಗಳ ರೀತಿ ಕ್ರಮ ಜರುಗಿಸಲಾಗುವುದು.

ದಾವಣಗೆರೆ ವಿಶ್ವವಿದ್ಯಾನಿಲಯ **Davangere University** [redacted]

# ADMISSION TICKET

| | |
|---|---|
| Course : | |
| Examination : | ....................................20.............................. |

| | | | | | |
|---|---|---|---|---|---|
| Name of the College : | | College Code | | | |

| | | | | | | | | | | | |
|---|---|---|---|---|---|---|---|---|---|---|---|
| Register No. | | | | | | | | | | | |

| | |
|---|---|
| Name in Kannada (As per SSLC Marks Card) | |
| Name in English (As per SSLC Marks Card) | |
| Father Name : | |
| Mother Name : | |

| Date of Birth | D | | M | | Y | | | |
|---|---|---|---|---|---|---|---|---|
| | | | | | | | | |

| Sex : | Male | | Female | | Medium : | English | | Kannada | |
|---|---|---|---|---|---|---|---|---|---|

**(Against each paper, write 'AP' if appearing, 'NA' if not appearing; Month & Year if already Passed)**

| I SEMESTER | II SEMESTER | III SEMESTER |
|---|---|---|
| | | |
| **IV SEMESTER** | **V SEMESTER** | **VI SEMESTER** |
| | | |
| Remarks : | | |

Signature of the Student

Date :

Stamp Size Photo to be attested by the Registrar (Evaluation)

Signature of the Principal /Chairman With College /Dept. Seal

**REGISTRAR (EVALUATION)**

(PTO for Instructions to Students)

Reg. No. [ ] Degree : [ ]

Name :

Address for Communication :

No.of Papers Appearing : (A)................(B)..............(C).............(D)..........(E)...............(F).........

1) Exam fee (a) Theory......................(b) Practicals.....................(2) Marks Card Fee....................

Total Fee Paid...................... (Rupess..............................................................................only)

D.D./Receipt No. Date :

If Transferred from any other College, name of the Previous College...........................................

Mention the Register Number more than one (if any) allotted with year..........................................

---

1. Certify that the information furnished above are verified and found correct, and the student has got 75% Attendance (85% for B.P.Ed. and unless specified in other courses.) during current Semester/Year. Hence the student is eligible to appear for the Current Examination.

Certified Xerox copies of all **Marks Cards of All Previous Years (Xerox copies) and fees paid receipt are enclosed.**

Signature of the Student
Date:

Signature of the Principal/Chairman
with College/Department Seal
Date:

## ದಾವಣಗೆರೆ ವಿಶ್ವವಿದ್ಯಾನಿಲಯ

## ಪರೀಕ್ಷಾ ಅರ್ಜಿ ಭರ್ತಿ ಮಾಡಲು ಅಭ್ಯರ್ಥಿಗಳಿಗೆ ಸೂಚನೆಗಳು

1. ಪ್ರತಿ ವಿದ್ಯಾರ್ಥಿಗೆ ಪ್ರತ್ಯೇಕ ಕ್ರಮ ಸಂಖ್ಯೆ ಹೊಂದಿರುವ ಅರ್ಜಿ ನಮೂನೆ (ಪ್ರವೇಶ ಪತ್ರ ಒಳಗೊಂಡಂತೆ) ವಿತರಿಸಲಾಗಿದೆ.
2. ವಿವರಗಳನ್ನು ಸ್ಪಷ್ಟವಾಗಿ, ತಪ್ಪಿಲ್ಲದೆ, ಬರೆಯಬೇಕು.
3. ಯಾವ ಐಟಂಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಮುದ್ರಿಸಲಾಗಿದೆಯೋ ಆ ಮಾಹಿತಿಯಲ್ಲಿ ಯಾವುದಾದರೂ ಬದಲಾವಣೆ ಆಗಬೇಕಾಗಿದ್ದಲ್ಲಿ ಅದನ್ನು ರಿಮಾರ್ಕ್ಸ್ ಎಂದು ತೋರಿಸಿರುವ ಅಂಕಣದಲ್ಲಿ ಸಂಕ್ಷಿಪ್ತವಾಗಿ ಬರೆಯಬೇಕು.
4. ಅಲ್ಲಿ ಅಗತ್ಯವಾದ ಮಾಹಿತಿಯನ್ನು ಸ್ಪಷ್ಟ ಅಕ್ಷರಗಳಲ್ಲಿ (Capital Letters) ಬರೆಯಬೇಕು. ಉದಾಃ ಹುಟ್ಟಿದ ದಿನಾಂಕ, ವಯಸ್ಸು, ಖಾಯಂ ಅಂಚೆ ವಿಳಾಸ ಮತ್ತು ಶುಲ್ಕ ಪಾವತಿಯ ವಿವರಗಳು.
5. ನಿಗದಿಪಡಿಸಿರುವ ಸ್ಥಳಗಳಲ್ಲಿ ಅರ್ಜಿಯ ಮೇಲೆ ಒಂದು ಹಾಗೂ ಪ್ರವೇಶಪತ್ರದ ಮೇಲೆ ಮತ್ತೊಂದು ಹೀಗೆ ಇತ್ತೀಚಿನ ಸ್ಟಾಂಪ್ ಅಳತೆಯ ಎರಡು ಭಾವ ಚಿತ್ರಗಳನ್ನು ಅಂಟಿಸಬೇಕು (ಪಿನ್ ಮಾಡಬಾರದು). ಅರ್ಜಿಯ ಮೇಲೆ ಇರುವ ಭಾವಚಿತ್ರವನ್ನು ಆ ಕಾಲೇಜಿನ ಪ್ರಾಂಶುಪಾಲರು ದೃಢೀಕರಿಸಬೇಕು. ಪ್ರವೇಶ ಪತ್ರದ ಮೇಲೆ ಇರುವ ಭಾವಚಿತ್ರವನ್ನು ಕುಲಸಚಿವ(ಪರೀಕ್ಷಾಂಗ) ಇವರು ದೃಢೀಕರಿಸುತ್ತಾರೆ.
6. ಯಾವುದಾದರೂ ಪತ್ರಿಕೆಗೆ ವಿದ್ಯಾರ್ಥಿ ಈ ಪರೀಕ್ಷೆಗೆ ಹಾಜರಾಗಲು ಇಚ್ಛಿಸದಿದ್ದಲ್ಲಿ ಅದರ ಎದುರಿಗೆ (ಪರೀಕ್ಷಾ ಅರ್ಜಿ ಹಾಗೂ ಪ್ರವೇಶ ಪತ್ರ ಎರಡರಲ್ಲಿಯೂ) NA ಎಂದು ನಮೂದಿಸಬೇಕು. ವಿದ್ಯಾರ್ಥಿ ಯಾವ ಪತ್ರಿಕೆಗಳನ್ನು ಈ ಪರೀಕ್ಷೆಯಲ್ಲಿ ಹಾಜರಾಗಲು ಇಚ್ಛಿಸಿರುತ್ತಾರೋ ಅವುಗಳ ಎದುರಿಗೆ APP ಎಂದು ನಮೂದಿಸಬೇಕು.
7. ಅರ್ಜಿ ನಮೂನೆಯ ರಿಜಿಸ್ಟರ್ ನಂ. ಕೆಳಗೆ ಇರುವ ಸ್ಥಳದಲ್ಲಿ ಅಭ್ಯರ್ಥಿಯ ಹೆಸರನ್ನು ಕನ್ನಡದಲ್ಲಿ ಬರೆಯಬೇಕು. (ಈ ಮಾಹಿತಿ ಪದವಿ ಪ್ರಮಾಣ ಪತ್ರದಲ್ಲಿ ನಮೂದಿಸಲು ಬೇಕಾಗುತ್ತದೆ).
8. ಪರೀಕ್ಷೆ ತೆಗೆದುಕೊಳ್ಳುವ ಎಲ್ಲಾ ಅಭ್ಯರ್ಥಿಗಳು ನಿಗದಿಪಡಿಸಲಾದ ದಿನಾಂಕಗಳಂದು ಅಥವಾ ಅದಕ್ಕಿಂತ ಮುಂಚಿತವಾಗಿ ತಾವು ವ್ಯಾಸಂಗ ಮಾಡುತ್ತಿರುವ/ಮಾಡುತ್ತಿದ್ದ ಕಾಲೇಜುಗಳಲ್ಲಿಯೇ ಅರ್ಜಿಗಳನ್ನು ಪಡೆದು ನಿಗದಿತ ಶುಲ್ಕವನ್ನು ಪಾವತಿಸಿ ಮತ್ತು ತಾವು ಹಾಜರಿದ್ದ ಹಿಂದಿನ ಎಲ್ಲಾ ಪರೀಕ್ಷೆಗಳ ಅಂಕಪಟ್ಟಿಗಳ ದೃಢೀಕರಿಸಿದ (ಜೆರಾಕ್ಸ್) ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸಿಕೊಡಬೇಕು. ವಿಶ್ವವಿದ್ಯಾನಿಲಯಕ್ಕೆ ನೇರವಾಗಿ ಬರುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
9. ಪರೀಕ್ಷಾ ಫಲಿತಾಂಶ ಪ್ರಕಟಗೊಂಡ 30 ದಿನಗಳ ಒಳಗೆ ಫಲಿತಾಂಶವನ್ನು ತಿರಸ್ಕರಿಸಿ ನಂತರ ಪರೀಕ್ಷೆಗೆ ಕುಳಿತುಕೊಳ್ಳುವ ಅಂತಿಮ ವರ್ಷದ ಅಭ್ಯರ್ಥಿಗಳು ಈ ಸಂಬಂಧ ವಿಶ್ವವಿದ್ಯಾನಿಲಯದಲ್ಲಿ ಪಡೆದ ಅನುಮತಿ ಪತ್ರದ ದೃಢೀಕೃತ ಪ್ರತಿಯನ್ನು ಕಡ್ಡಾಯವಾಗಿ ಪರೀಕ್ಷಾ ಅರ್ಜಿಯಲ್ಲಿ ಲಗತ್ತಿಸಬೇಕು.
10. ಅಂಕಗಳ ಮರು ಎಣಿಕೆ/ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಸಹ ಪರೀಕ್ಷೆಗೆ ನಿಗಧಿಪಡಿಸಿದ ದಿನಾಂಕದೊಳಗೆ ಪರೀಕ್ಷಾ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಬೇಕು.
11. ತಡವಾಗಿ ಫಲಿತಾಂಶ ಪ್ರಕಟವಾಗುವ (ಟಿ.ಎ.ಎಲ್.) ಅಭ್ಯರ್ಥಿಗಳಿಗೆ ಅದರ ಫಲಿತಾಂಶ ಪ್ರಕಟವಾದ ದಿನಾಂಕದಿಂದ 7 ದಿನಗಳ ಅವಧಿಯೊಳಗೆ ದಂಡ ಶುಲ್ಕವಿಲ್ಲದೆ ಪರೀಕ್ಷಾ ಶುಲ್ಕವನ್ನು ಸಂದಾಯ ಮಾಡಲು ಅವಕಾಶ ಇದೆ.
12. ಪರೀಕ್ಷಾ ಅಕ್ರಮಗಳಲ್ಲಿ ತೊಡಗಿದ್ದು ಶಿಸ್ತು ಪ್ರಾಧಿಕಾರ ಆ ಅಭ್ಯರ್ಥಿಗೆ ಮುಂದಿನ ಪರೀಕ್ಷೆ ತೆಗೆದುಕೊಳ್ಳಬಹುದೆಂದು ನಿರ್ಣಯಿಸಿದಲ್ಲಿ ಅಂತಹ ಪ್ರಕರಣಗಳಲ್ಲಿ ಅಂತಿಮ ದಿನಾಂಕ ಮುಗಿದಿದ್ದರೂ ಸಹ ಅನುಮತಿ ಪತ್ರ ತಲುಪಿದ ದಿನಾಂಕದಿಂದ (ಅಭ್ಯರ್ಥಿಗೆ ಅಥವಾ ಕಾಲೇಜಿಗೆ ಯಾವುದು ಮೊದಲೋ ಅದು) 7 ದಿನಗಳವರೆಗೆ ದಂಡ ಶುಲ್ಕವಿಲ್ಲದೇ ಪರೀಕ್ಷಾ ಶುಲ್ಕ ಇತ್ಯಾದಿಯನ್ನು ಪಾವತಿಸಲು ಅವಕಾಶವಿದೆ.
13. ಪರೀಕ್ಷಾ ಶುಲ್ಕವನ್ನು ಯಾವ ಕಾರಣದಿಂದಲೂ ಮರುಪಾವತಿ ಮಾಡಲಾಗುವುದಿಲ್ಲ ಹಾಗೂ ಮುಂದಿನ ಪರೀಕ್ಷೆಗಳಿಗೆ ಅದನ್ನು ಸರಿದೂಗಿಸಿಕೊಳ್ಳಲಾಗುವುದಿಲ್ಲ.
14. ಯಾವ ವಿದ್ಯಾರ್ಥಿ ಶೇಕಡಾ 75 ಹಾಜರಾತಿ ಗಳಿಸಿರುವುದಿಲ್ಲವೋ ಅಂತಹ ವಿದ್ಯಾರ್ಥಿ ಪರೀಕ್ಷಾ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. ಪ್ರವೇಶ ಅನುಮೋದನೆಯಾಗದಿರುವುದು, ಸರಿಯಾದ ಪರೀಕ್ಷಾ ಶುಲ್ಕ ಇತ್ಯಾದಿ ಪಾವತಿಸದಿರುವುದು, ಹಾಜರಾತಿ ಕೊರತೆ, ಪರೀಕ್ಷಾ ಅಕ್ರಮವಾಗಿರುವುದು ಇತ್ಯಾದಿ ನ್ಯೂನತೆ ಇರುವುದು ಕಂಡು ಬಂದಲ್ಲಿ ಅಂತಹವರ ಫಲಿತಾಂಶ ತಡೆ ಹಿಡಿಯಲಾಗುವುದು.
15. ಪರೀಕ್ಷಾ ಶುಲ್ಕವನ್ನು ಪಾವತಿಸಿ ಆ ಪರೀಕ್ಷೆಯ ಯಾವುದೂ ಪತ್ರಿಕೆಗೆ ಹಾಜರಾಗದ ಅಭ್ಯರ್ಥಿಗೆ ಹಾಗೂ ಪರೀಕ್ಷೆಗೆ ಹಾಜರಾಗಿ ಅನುತ್ತೀರ್ಣರಾದ ಅಥವಾ ಭಾಗಶಃ ಪಾಸಾದ ವಿದ್ಯಾರ್ಥಿಗಳಿಗೆ ಅಂಕಪಟ್ಟಿಯನ್ನು ವಿತರಿಸಲಾಗುವುದಿಲ್ಲ.
16. ಪ್ರವೇಶ ಪತ್ರದೊಂದಿಗೆ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷಾ ವೇಳಾಪಟ್ಟಿಗಳನ್ನು ಲಗತ್ತಿಸಿಕೊಡಲಾಗುವುದು.
17. ಅಂತಿಮ ದಿನಾಂಕದ ನಂತರ ಸಲ್ಲಿಸಿದ, ಅಪೂರ್ಣವಾಗಿ ಭರ್ತಿ ಮಾಡಿದ ನಿಗದಿತ ಶುಲ್ಕಕ್ಕೆ ಡಿ.ಡಿ. ಲಗತ್ತಿಸದ, ಹಿಂದಿನ ಪರೀಕ್ಷೆಗಳ ಎಲ್ಲಾ ಅಂಕಪಟ್ಟಿಗಳ ದೃಢೀಕೃತ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
18. ಶುಲ್ಕ ಪಾವತಿಸಲು, ಅರ್ಜಿ ಸಲ್ಲಿಸಲು, ನಿಗದಿಪಡಿಸಿರುವ ದಿನಾಂಕವನ್ನು ಯಾವುದೇ ಕಾರಣದಿಂದಲೂ ವಿಸ್ತರಿಸಲಾಗುವುದಿಲ್ಲ.
19. ಯಾವ ಅಭ್ಯರ್ಥಿ ಯಾವ ಕೇಂದ್ರದಲ್ಲಿ ಥಿಯರಿ ಪರೀಕ್ಷೆ ಬರೆಯಬೇಕು ಎಂಬುದನ್ನು ಪ್ರವೇಶ ಪತ್ರದಲ್ಲಿ ಮುದ್ರಿಸಲಾಗಿದೆ. ಪರೀಕ್ಷಾ ಕೇಂದ್ರ ಬದಲಿಸಲು ಅವಕಾಶವಿಲ್ಲ. ಅಭ್ಯರ್ಥಿಯ ಪ್ರಯೋಗಿಕ ಪರೀಕ್ಷೆ ಕೇಂದ್ರಗಳನ್ನು ಸಂಬಂದಿಸಿದ ಕಾಲೇಜುಗಳಲ್ಲಿ ಮಾಹಿತಿ ಪಡೆಯತಕ್ಕದು.
20. ಯಾವ ಪತ್ರಿಕೆಗೆ ಯಾವ ಸಂಕ್ಷಿಪ್ತ ಹೆಸರನ್ನು ಕೊಡಲಾಗಿದೆ ಎಂಬುದನ್ನು ಕಾಲೇಜಿನಲ್ಲಿ ಪಡೆಯಬಹುದು.

### ಶುಲ್ಕಗಳ ಪಾವತಿ ಬಗ್ಗೆ ವಿವರಣೆ

21. ಪ್ರತಿ ವರ್ಷ / ಸೆಮಿಸ್ಟರ್‌ಗೆ ಪ್ರತ್ಯೇಕವಾಗಿ ಅಂಕಪಟ್ಟಿಗಳನ್ನು ವಿತರಿಸಬೇಕಾಗಿರುವುದರಿಂದ ಪ್ರತಿ ವರ್ಷ / ಸೆಮಿಸ್ಟರ್‌ಗೆ ಪ್ರತ್ಯೇಕವಾಗಿ ಅಂಕಪಟ್ಟಿ ಶುಲ್ಕಗಳನ್ನು ಪಾವತಿಸಬೇಕು.
22. ಪಾವತಿಸಬೇಕಾದ ಒಟ್ಟು ಶುಲ್ಕಕ್ಕೆ ಡಿ.ಡಿ.ಯನ್ನು <u>**"The Finance Officer, Davangere University"**</u> ಈ ಹೆಸರಿನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಸಂದಾಯವಾಗುವಂತೆ ಪಡೆಯಬೇಕು. ಅಥವಾ **Electronic transfer** ಮುಖಾಂತರ <u>A/c. No: 64050447124</u> ಜಮಾ ಮಾಡಿ ಮೂಲ ಚಲನ್ ಪ್ರತಿ ಸಲ್ಲಿಸತಕ್ಕದ್ದು.
23. ಶುಲ್ಕವನ್ನು ನಗದು/ಚೆಕ್/ಚಲನ್ ಇತ್ಯಾದಿಗಳ ಮೂಲಕ ಸ್ವೀಕರಿಸಲಾಗುವುದಿಲ್ಲ. ಆದರೆ ಪ್ರಾಂಶುಪಾಲರು ವಿದ್ಯಾರ್ಥಿಗಳಿಂದ ನಗದಾಗಿ ಪಡೆದು ಒಟ್ಟು ಶುಲ್ಕಕ್ಕೆ ಡಿ.ಡಿ.ಯನ್ನು ಪಡೆದು ಕಳುಹಿಸಲು ಆಯಾ ಕಾಲೇಜಿನ ಪ್ರಾಂಶುಪಾಲರಿಗೆ ಅವಕಾಶವಿರುತ್ತದೆ.

[redacted]

# ದಾವಣಗೆರೆ ವಿಶ್ವವಿದ್ಯಾನಿಲಯ Davangere University

## EXAMINATION APPLICATION FORM

Stamp size Photo to be attested by the Principal

| | | | |
|---|---|---|---|
| Course : | | | |
| Examination : | ......................................20.............................. | | |
| Name of the College : | | College Code | |
| Register No. | | | |
| Name in Kannada (As per SSLC Marks Card) | | | |
| Name in English (As per SSLC Marks Card) | | | |
| Father Name : | | | |
| Mother Name : | | | |

| Date of Birth | D | M | Y | Caste | Reservation Category |
|---|---|---|---|---|---|
| | | | | | |

| Sex : | Male | | Female | | Medium : | English | | Kannada | |
|---|---|---|---|---|---|---|---|---|---|

**(Against each paper, write 'AP' if appearing, 'NA' if not appearing; Month & Year if already Passed)**

| I SEMESTER | II SEMESTER | III SEMESTER |
|---|---|---|
| | | |
| **IV SEMESTER** | **V SEMESTER** | **VI SEMESTER** |
| | | |
| Remarks : | | |

Signature of the Student

Date :

Signature of the Principal /Chairman
With College /Dept. Seal

(Note: Corrections /Additions with respect to subject code numbers, if any, shall be indicated clearly)